PART IV

Section—2B (ii)

AUTHORISED TRANSLATIONS OF KARNATAKA ACTS AND ORDINANCES IN KANNADA LANGUAGE

ವಿಧಿ ಮತ್ತು ಸಂಸದೀಯ ವ್ಯವಹಾರಗಳ ಸೆಚಿವಾಲಯ

ಅಧಿಸೂಚನೆ

ಕ್ರಮಾಂಕ ಲಾ ೧೧ ಎಲ್‌ಜಿಎನ್ ೭೫, ಬೆಂಗಳೂರು ದಿನಾಂಕ ೨೨ನೇ ಮೇ ೧೯೭೫.

ಭಾರತ ಗಣರಾಜ್ಯದ ಇಪ್ಪತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾದ ೧೯೭೫ನೇ ಇಸವಿಯ ಕರ್ನಾಟಕ (ಕೆಲವು ಶಿಕ್ಷಕರ ನಿವೃತ್ತಿ ವಯೋಮಾನವನ್ನು ನಿರ್ಧರಿಸುವ) ಅಧ್ಯಾದೇಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ೧೯೭೫ರ ೨೩ನೇ ಕ್ರಮಾಂಕದ ಕರ್ನಾಟಕ ಅಧ್ಯಾದೇಶವಾಗಿ ಸರ್ವಸ್ತ ಜನರ ತಿಳಿವಳಿಕೆಗೋಸ್ಕರ ಪ್ರಕಟಿಸತಕ್ಕುದೆಂದು ಆದೇಶಿಸಲಾಗಿದೆ.

೧೯೭೫ರ ಕರ್ನಾಟಕ ಅಧ್ಯಾದೇಶ ಕ್ರಮಾಂಕ. ೨

(ಕರ್ನಾಟಕ ಕೆಲವು ಶಿಕ್ಷಕರ ನಿವೃತ್ತಿ ವಯೋಮಾನವನ್ನು ನಿರ್ಧರಿಸುವ)

ಅಧ್ಯಾದೇಶ ೧೯೭೫.

(ಭಾರತ ಗಣರಾಜ್ಯದ ಇಪ್ಪತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ ೧೯೭೫ರ ಮೇ ಇಪ್ಪತ್ತೆರಡನೆಯ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಯಿತು)

ರಾಜ್ಯದ ಕೆಲವು ಶಿಕ್ಷಕರ ನಿವೃತ್ತಿ ವಯೋಮಾನವನ್ನು ನಿರ್ಧರಿಸುವ ಅಧ್ಯಾದೇಶ.

ಕೆಲವು ಸರ್ಕಾರಿ ನೌಕರರ ನಿವೃತ್ತಿ ವಯೋಮಾನವನ್ನು ಐವತ್ತೈದಿಂದ ಐವತ್ತೈದು ವರ್ಷಕ್ಕೆ ತಗ್ಗಿಸುವ ಸಲುವಾಗಿ ಕೈಕೊಂಡ ಕಾರ್ಯನೀತಿಗೆ ಅನುಸಾರವಾಗಿ ೧೯೫೬ರ ನವೆಂಬರ್ ೧ನೆಯ ದಿನಾಂಕಕ್ಕೆ ತತ್ಪೂರ್ವದಲ್ಲಿ ಮೈಸೂರು ಸೇವಾವಿನಿಮಗಳ ೨೯ನೇ ಅನುಚ್ಛೇದದ (೩) ಖಂಡದ ಕೆಳಗಿನ ೪ನೆಯ ಟಿಪ್ಪಣಿಯವರೆಗೆ ಪರಿಪಾಲಿತರಾದ ಹಿಂದಿನ ಮೈಸೂರು ರಾಜ್ಯದ ಶಿಕ್ಷಕರಿಗೆ ಸಂಬಂಧಪಟ್ಟಂತೆ ೧೯೬೪ರ ಜನವರಿ ೩೦ನೆಯ ದಿನಾಂಕದ ಜಿ. ಎಸ್. ಆರ್. ೨೧ ಎಫ್. ಡಿ. ೧೫೦ ಎಸ್. ಆರ್. ಎಸ್. ೭೩)ನೇ ಕ್ರಮಾಂಕದ ಅಧಿಸೂಚನೆಯು ಹೊರಡಿಸಲ್ಪಟ್ಟಿದ್ದರಿಂದಲೂ,

ಸದರಿ ಅಧಿಸೂಚನೆಗೆ ಅನುಸಾರವಾಗಿ ನಿವೃತ್ತಿ ಮಾಡಲಾಗುತ್ತಿದ್ದುದರಿಂದಲೂ,

೧೯೭೪ರ ೫೨ನೇ ಕ್ರಮಾಂಕದ ರಿಟ್ ಅರ್ಜಿಯಲ್ಲಿ ಮತ್ತು ಸಂಬಂಧಪಟ್ಟ ರಿಟ್ ಅರ್ಜಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ಕರ್ನಾಟಕ ಸಿವಿಲ್ ಸೇವಾನಿಯಮಗಳ ೯೫ನೇ ನಿಯಮದ ದೃಷ್ಟಿಯಿಂದ ಅಂಥ ಶಿಕ್ಷಕರ ನಿವೃತ್ತಿ ವಯೋಮಾನವನ್ನು ಕಡಿಮೆ ಮಾಡುವ ಉದ್ದೇಶಿತ ಪರಿಗಾಮವು ಸದರಿ ಅಧಿಸೂಚನೆಯಲ್ಲಿ ಇರುವುದಿಲ್ಲವೆಂಬುದಾಗಿ ಅಭಿಪ್ರಾಯ ಪಟ್ಟಿರುವುದರಿಂದಲೂ,

ಈ ಉದ್ದೇಶಗಳಿಗಾಗಿ ಸೂಕ್ತ ಉಪ-ಬಂಧ ಕಲ್ಪಿಸುವುದು ಅವಶ್ಯಕವಾಗಿರುವುದರಿಂದಲೂ,

ರಾಜ್ಯ ವಿಧಾನ ಮಂಡಲದ ಉಭಯಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದಲೂ, ಶಿಕ್ಷಕರ ನಿವೃತ್ತಿ ವಯೋಮಾನವನ್ನು ಕಡಿಮೆ ಮಾಡುವ ಸಂಬಂಧದಲ್ಲಿ ಈಪಬಂಧ ಕಲ್ಪಿಸಲು ಶೀಘ್ರ ಕ್ರಮ ಕೈಕೊಳ್ಳುವುದನ್ನು ಅಪೇಕ್ಷಿಸುವಂಥ ವಿದ್ಯಮಾನಗಳು ಉಂಟಾಗಿರುವುದೆಂದು ರಾಜ್ಯಪಾಲರಿಗೆ ವಿದಿತವಾಗಿರುವುದರಿಂದಲೂ,

೧೯೫೬ರ ರಾಜ್ಯ ಪುನಸ್ಸಂಘಟನಾ ಅಧಿನಿಯಮದ (೧೯೫೬ರ ಕೇಂದ್ರಾಧಿನಿಯಮ ೩೭) ೧೨೧ನೇ ಪ್ರಕರಣದ (೨)ನೇ ಒಳಪ್ರಕರಣದ ಪರಂತುಕದ ಮೇರೆಗೆ ಭಾರತ ಸರ್ಕಾರದ ನೌಕರವರ್ಗ ಮತ್ತು ಆಡಳಿತ ಸುಧಾರಣ ವಿಭಾಗದ (ಮಂತ್ರಿಮಂಡಲದ ಸಚಿವಾಲಯ) ೧೯೭೪ರ ಜನವರಿ ೨೧ನೆಯ ದಿನಾಂಕದ, ೨/೨೩/೭೩ನೇ ಕ್ರಮಾಂಕದ ಪತ್ರದಲ್ಲಿರುವಂತೆ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದಿರುವುದರಿಂದಲೂ

ಈಗ, ಕರ್ನಾಟಕ ರಾಜ್ಯಪಾಲರು, ಭಾರತ ಸಂವಿಧಾನದ ೨೧೩ನೇ ಅನುಚ್ಛೇದದ (೧)ನೇ ಒಳಖಂಡದಿಂದ ಪ್ರದತ್ತವಾದ ಶಕ್ತಿಗಳನ್ನು ಪ್ರಯೋಗಿಸಿ ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಅಂದರೆ :—

೧. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.—(೧) ಈ ಅಧ್ಯಾದೇಶವನ್ನು ಕರ್ನಾಟಕ (ಕೆಲವು ಶಿಕ್ಷಕರ ನಿವೃತ್ತಿ ವಯೋಮಾನವನ್ನು ನಿರ್ಧರಿಸುವ) ಅಧ್ಯಾದೇಶ, ೧೯೭೫ ಎಂದು ಕರೆಯತಕ್ಕದ್ದು.

(೨) ೧೯೭೪ರ ಜನವರಿ ೩೦ನೆಯ ದಿನಾಂಕದಂದು ಇದು ಜಾರಿಗೆ ಬಂದಿರುವುದಾಗಿ ಭಾವಿಸಲು ಡತಕ್ಕದ್ದು.

೨. ನಿವೃತ್ತಿ ವಯೋಮಾನ.— ಯಾವುದೇ ನ್ಯಾಯಾಲಯದ ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರಿ ವರ್ಗದ ಯಾವುದೇ ನಿರ್ಣಯ, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ:

(೧) (ಇದರಲ್ಲಿ ಇನ್ನು ಮುಂದೆ ನಿಯುಕ್ತ ದಿನಾಂಕವೆಂದು ಉಲ್ಲೇಖಿತವಾದ ಈ ಅಧ್ಯಾದೇಶವು ಪ್ರಾರಂಭವಾದ ದಿನಾಂಕದಂದು ಮತ್ತು ದಿನಾಂಕದಿಂದ,

(i) ೧೯೫೬ರ ನವಂಬರ್ ೧ನೆಯ ದಿನಾಂಕಕ್ಕೆ ತತ್ಪೂರ್ವದಲ್ಲಿ ಮೈಸೂರು ಸೇವಾನಿಯಮಗಳ ೨೯ನೆಯ ಅನುಚ್ಛೇದದ (೩) ಖಂಡದ ಕೆಳಗಿನ ೪ನೆಯ ಟಿಪ್ಪಣಿಯ ಮೇರೆಗೆ ಪರಿಪಾಲಿತರಾಗಿ ಕರ್ನಾಟಕ ರಾಜ್ಯಕ್ಕೆ ವರ್ಗಾವಣೆ ಪಡೆದಿರುವ ಮತ್ತು ನಿಯುಕ್ತ ದಿನಾಂಕದಂದು ಸೇವೆಯಲ್ಲಿರುವ ಹಿಂದಿನ ಮೈಸೂರು ರಾಜ್ಯದ ಪ್ರತಿಯೊಬ್ಬ ಶಿಕ್ಷಕನ ಕಡ್ಡಾಯ ನಿವೃತ್ತಿ ದಿನಾಂಕವು ಅವನಿಗೆ ಯಾವ ದಿನಾಂಕದಂದು ಐವತ್ತೆರಡು ವರ್ಷ ಪೂರ್ಣಗೊಳ್ಳುವುದೋ ಆ ದಿನಾಂಕವಾಗಿರತಕ್ಕದ್ದು.

(ii) ಕರ್ನಾಟಕ ಸೇವಾನಿಯಮಾವಳಿಯ ೯೫ನೇ ನಿಯಮ (ಎ) ಖಂಡದಲ್ಲಿ "೧೯೫೬ರ ರಾಜ್ಯಗಳ ಪುನಸಂಘಟನಾ ಅಧಿನಿಯಮದ ಪ್ರಕರಣ ೧೨೧ರ ಮೇರೆಗೆ ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಸೇವೆ ಸಲ್ಲಿಸಲು ವಂಡನ ಮಾಡಲಾದ ಅಥವಾ ವಂಟನ ಮಾಡುವುದೆಂದು ಭಾವಿಸಲಾದ ವ್ಯಕ್ತಿಗಳ ಸಂಬಂಧದಲ್ಲಿ ಭಾರತ ಸರ್ಕಾರದವರಿಂದ ನಿರ್ದಿಷ್ಟಪಡಿಸಲಾದ ಸೇವಾ ಷರತ್ತುಗಳ ರಕ್ಷಣೆಗೆ ಸಂಬಂಧಪಟ್ಟ ಉಪಬಂಧಗಳಿಗೆ ಒಳಪಟ್ಟು" ಎಂಬ ಪದಗಳು ಮತ್ತು ಅಂಕಿಗಳು ಅಂತಹ ಶಿಕ್ಷಕರಿಗೆ ಸಂಬಂಧವಡುವಷ್ಟರ ಮಟ್ಟಿಗೆ ಅನ್ವಯವಾಗತಕ್ಕದಲ್ಲ.

(೨) ತದನುಸಾರವಾಗಿ ಅಂತಹ ಪ್ರತಿಯೊಬ್ಬ ಶಿಕ್ಷಕನು:

(i) ಐವತ್ತೈದು ವರ್ಷಗಳು ಆಗಿದ್ದರೂ ಸಹ ನಿಯುಕ್ತ ದಿನಾಂಕದ ತರುವಾಯ ಸೇವೆಯಲ್ಲಿ ಮುಂದುವರಿಯುತ್ತಿದ್ದಲ್ಲಿ, ಯಾವ ದಿನಾಂಕದಂದು ಐವತ್ತೈದು ವರ್ಷಗಳು ಪೂರ್ಣಗೊಳ್ಳುವುದೋ ಆ ದಿನಾಂಕದಂದು ಅಥವಾ ೧೯೭೪ರ ಮಾರ್ಚ್ ೧ನೇ ದಿನಾಂಕದಂದು ಇವುಗಳಲ್ಲಿ ಯಾವುದು ಮುಂಚಿತವೋ ಆ ದಿನಾಂಕದಂದು ನಿವೃತ್ತಿ ಹೊಂದತಕ್ಕದ್ದು.

(ii) ನಿಯುಕ್ತ ದಿನಾಂಕದ ತರುವಾಯ ಆದೇಶ ೧೯೭೪ರ ಮಾರ್ಚ್ ೧ನೇ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿ ಐವತ್ತೈದು ವರ್ಷ ವಯಸ್ಸು ಪೂರ್ಣಗೊಂಡಿದ್ದರೆ ೧೯೭೪ರ ಮಾರ್ಚ್ ೧ನೇ ದಿನಾಂಕದಂದು ನಿವೃತ್ತಿ ಹೊಂದತಕ್ಕದ್ದು.

(iii) ೧೯೭೪ರ ಮಾರ್ಚ್ ೧ನೇ ದಿನಾಂಕದ ತರುವಾಯ ಐವತ್ತೈದು ವರ್ಷ ವಯಸ್ಸು ಪೂರ್ಣಗೊಂಡರೆ ಯಾವ ತಿಂಗಳಿನಲ್ಲಿ ಐವತ್ತೈದು ವರ್ಷ ಪೂರ್ಣವಾಗುವುದೋ ಆ ತಿಂಗಳ ಕೊನೆಗೆ ನಿವೃತ್ತಿ ಹೊಂದತಕ್ಕದ್ದು.

(೩) ಕರ್ನಾಟಕ ಸಿವಿಲ್ ಸೇವಾನಿಯಮಾವಳಿಯಲ್ಲಿ ವಿರುದ್ಧವಾಗಿ ಏನೇ ಇದ್ದರೂ, ನಿಯುಕ್ತ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗಾಗಿ ನಿವೃತ್ತಿ ಹೊಂದುವ ಯಾವನೇ ಶಿಕ್ಷಕನಿಗೆ ನಿವೃತ್ತಿ ಹೊಂದುವ ದಿನಾಂಕದಂದು ಅಂಥ ಶಿಕ್ಷಕನ ಲೆಕ್ಕದಲ್ಲಿ ಜಮೆಯಿರುವ ನೂರ ಇಪ್ಪತ್ತು ದಿವಸಗಳಿಗೆ ಮಿಗಿಲಾದ ಪೂರ್ಣಗಳಿಕೆ ರಜವನ್ನು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಕರ್ನಾಟಕ ಸಿವಿಲ್ ಸೇವಾನಿಯಮಾವಳಿಯ ನಿಯಮ ೧೧೮ರ ಮೇರೆಗೆ ನಿರಾಕರಿಸಲಾಗಿದೆಯೆಂದು ಭಾವಿಸತಕ್ಕುದು ಮತ್ತು ಅದನ್ನು ತಾನು ನಿವೃತ್ತಿ ಹೊಂದುವ ದಿನಾಂಕದಿಂದ ತೆಗೆದುಕೊಳ್ಳಲು ಅನುಮತಿ ಕೊಡತಕ್ಕುದು ;

ಪರಂತು ಅಂತಹ ಶಿಕ್ಷಕನು ಅವನ ಮೂಲ ರಾಜ್ಯದಲ್ಲಿ ಅನ್ಯಯವಾಗುವ ನಿಯಮಗಳಿಂದ ಪರಿಪಾಲಿತನಾಗುವ ಸಂದರ್ಭದಲ್ಲಿ, ಅಂತಹ ರಜೆಯ ಅವಧಿಯು ಅದು ಗಳಿಕೆ ರಜೆಯಾಗಿರಲಿ ಅಥವಾ ವಿಶೇಷ ರಜೆಯಾಗಿರಲಿ ಅಥವಾ ಫಲೋ ರಜೆಯಾಗಿರಲಿ ಅದನ್ನು ಸರಾಸರಿ ವೇತನದೊಂದಿಗೆ ಅಂತಹ ನಿಯಮಾವಳಿಯ ಮೇರೆ ಅನುಮತಿಸಲಾಗುವಂತೆ ಇರತಕ್ಕುದು ;

ಅಷ್ಟೇ ಅಲ್ಲದೆ ಈ ಒಳ ಪ್ರಕರಣದಲ್ಲಿರುವ ಯಾವುದೂ ನಿಯುಕ್ತ ದಿನಾಂಕದಂದು ನಿವೃತ್ತಿಗೆ ಪೂರ್ವ ಭಾವಿಯಾದ ರಜೆಯಲ್ಲಿ ಇರುವ ಯಾವ ಶಿಕ್ಷಕನಿಗೂ ಅನ್ವಯಿಸತಕ್ಕುದಲ್ಲ.

(೪) ಈ ಪ್ರಕರಣದಲ್ಲಿ ಏನೇ ಇದ್ದರೂ ಐವತ್ತೈದು ವರ್ಷಗಳು ಪೂರ್ಣಗೊಂಡರೂ ಸಹ ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ಇತರ ರೀತಿಯ ಮೂಲಕ ಸೇವೆಯಲ್ಲಿ ಮುಂದುವರಿದಿರುವ ಮತ್ತು ಈ ಆಧ್ಯಾದೇಶದ ಪ್ರಖ್ಯಾಪನೆಯ ದಿನಾಂಕದಂದು ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವ ಯಾವನೆ ಶಿಕ್ಷಕನು ೧೯೭೫ರ ಮೇ ೩೧ನೇ ದಿನಾಂಕದ ಮಧ್ಯಾಹ್ನದಿಂದ ಸೇವೆಯಿಂದ ನಿವೃತ್ತನಾಗತಕ್ಕುದು ಮತ್ತು ಅತನಿಗೆ ನಿಯುಕ್ತ ದಿನಾಕದಿಂದ ೧೯೭೫ರ ಮೇ ೩೧ನೇ ದಿನಾಂಕದವರೆಗೆ ಸೇವಾ ವಿಸ್ತರಣೆಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕುದು.

೩. ಮ್ಯಾನೀಕರಣ.—ಈ ಸಂಬಂಧದಲ್ಲಿ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಮತ್ತು ನಿಯುಕ್ತ ದಿನಾಂಕದ ತರುವಾಯ ಆದರೆ ಈ ಆಧ್ಯಾದೇಶದ ಪ್ರಖ್ಯಾಪನೆಗೆ ಮುಂಚೆ ೨ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರವರ್ಗಕ್ಕೆ ಸೇರಿದ ಶಿಕ್ಷಕನ ನಿವೃತ್ತಿಯನ್ನು ಮಾನ್ಯವೆಂದು ಭಾವಿಸತಕ್ಕುದ ಮತ್ತು ಅದನ್ನು ಸದರಿ ಉಪಬಂಧಗಳು ಸೂಕ್ತವಾದ ಎಲ್ಲಾ ಕಾಲಗಳಲ್ಲಿ ಜಾರಿಯಲ್ಲಿದ್ದರೆ ಹೇಗೋ ಹಾಗೇ ಈ ಆಧ್ಯಾದೇಶದ ಉಪಬಂಧಗಳಿಗನುಸಾರವಾಗಿ ಕೈಗೊಳ್ಳಲಾಗಿದೆ ಅಥವಾ ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕುದು.

MOHANLAL SUKHADIA,
Governer of Karnataka

By Order and in the name of the Governor of Karnataka,

M. L. RAMASWAMY,
Joint Draftsman and Ex-Officio,
Joint Secretary to Government,
Dept. of Law and Parliamentary Affairs.

ವಿಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ.

ಅಧಿಸೂಚನೆ

ಕ್ರಮಾಂಕ ಲಾ ೧೩ ಎಲ್.ಜಿ.ಎನ್. ೭೫, ಬೆಂಗಳೂರು, ದಿನಾಂಕ ೨೨ನೇ ಮೇ ೧೯೭೫.

ಭಾರತ ಗಣರಾಜ್ಯದ ಇಪ್ಪತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾದ ೧೯೭೫ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ೧೯೭೫ರ ೩ನೇ ಕ್ರಮಾಂಕದ ಕರ್ನಾಟಕ ಅಧ್ಯಾದೇಶವಾಗಿ ಸಮಸ್ತ ಜನರ ತಿಳಿವಳಿಕೆಗೋಸ್ಕರ ಪ್ರಕಟಿಸತಕ್ಕುದೆಂದು ಆದೇಶಿಸಲಾಗಿದೆ.

೧೯೭೫ರ ಕರ್ನಾಟಕ ಅಧ್ಯಾದೇಶ ಕ್ರಮಾಂಕ ೩

ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ, ೧೯೭೫.

(ಭಾರತ ಗಣರಾಜ್ಯದ ಇಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ ೧೯೭೫ರ ಮೇ ಇಪ್ಪತ್ತೇರಡನೇ ದಿನದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲ್ಪಟ್ಟಿತು.)

೧೯೬೧ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧ್ಯಾದೇಶ.

ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ ೧೯೬೧ (೧೯೬೧ರ ಕರ್ನಾಟಕ ಅಧಿನಿಯಮ ೨೨)ನ್ನು ಈ ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಮತ್ತು ರಾಜ್ಯ ವಿಧಾನಮಂಡಲದ ಉಭಯಸದನಗಳು ಅಧಿವೇಶನದಲ್ಲಿರದಿರುವುದರಿಂದ ಮತ್ತು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ- ೧೯೬೧ (೧೯೬೧ರ ಕರ್ನಾಟಕ ಅಧಿನಿಯಮ ೨೨)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕೂಡಲೇ ಕ್ರಮ ಕೈಕೊಳ್ಳುವುದನ್ನು ಆವಶ್ಯಗೊಳಿಸುವಂಥ ಪರಿಸ್ಥಿತಿ ಉಂಟಾಗಿದೆಯೆಂದು ಕರ್ನಾಟಕ ರಾಜ್ಯಪಾಲರಿಗೆ ವಿಚಿತವಾಗಿರುವುದರಿಂದ,

ಈಗ, ಭಾರತ ಸಂವಿಧಾನದ ೨೧೩ನೇ ಅನುಚ್ಛೇದದ (೧)ನೇ ಖಂಡದಿಂದ ಪ್ರದತ್ತವಾದ ಶಕ್ತಿಗಳನ್ನು ಪ್ರಯೋಗಿಸಿ, ಕರ್ನಾಟಕ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಅಂದರೆ :—

೧. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.—(೧) ಈ ಅಧ್ಯಾದೇಶವನ್ನು, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ಅಧ್ಯಾನೇಶ, ೧೯೭೫ ಎಂದು ಕರೆಯತಕ್ಕುದು.

(೨) ಇದು ಕೂಡಲೇ ಜಾರಿಗೆ ಬರತಕ್ಕುದು.

೨. ೩ನೇ ಪ್ರಕರಣದ ತಿದ್ದುಪಡಿ.—(ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, ೧೯೬೧ (೧೯೬೧ರ ಕರ್ನಾಟಕ ಅಧಿನಿಯಮ ೨೨)ರ ೩ನೇ ಪ್ರಕರಣದಲ್ಲಿ (ಫೆ) ಖಂಡದ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಸ್ಥಾಪಿಸತಕ್ಕುದು, ಅಂದರೆ :—

''(ಘೆ)'' 'ನ್ಯಾಯಾಲಯ' ಎಂದರೆ.—

(i) ಬೆಂಗಳೂರು ನಗರದ ಒಳಗೆ ಅಡಕವಾಗಿದ್ದ ಪ್ರದೇಶದ ಸಂಬಂಧದಲ್ಲಿ, ಮಂತ್ತು

(ii) ರಾಜ್ಯಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚನೆ ನಡೆಸಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳಲ್ಲಿ, ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಿರುವ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ.

(iii) (i) ಮತ್ತು (ii)ನೇ ಒಳ ಖಂಡಗಳಲ್ಲಿ ಉಲ್ಲಿಖಿತವಾದುವುಗಳನ್ನು ಹೊರತುಪಡಿಸಿ ಇತರ ಪ್ರದೇಶಗಳ ಸಂಬಂಧದಲ್ಲಿ, ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಿರುವ ಮುನ್ಸೀಫರ ನ್ಯಾಯಾಲಯ.

೩. ೪ನೇ ಪ್ರಕರಣದ ಲೋಪ.—ಮೂಲ ಅಧಿನಿಯಮದ ೪ನೇ ಪ್ರಕರಣವನ್ನು ಲೋಪಿಸತಕ್ಕದ್ದು.

೪. ೯ನೇ ಪ್ರಕರಣದ ತಿದ್ದುಪಡಿ.—ಮೂಲ ಅಧಿನಿಯಮದ ೯ನೇ ಪ್ರಕರಣದಲ್ಲಿ.—

(i) ''ಅಥವಾ ಜಿಲ್ಲಾ ನ್ಯಾಯಾಧೀಶ'' ಎಂಬ ಪದಗಳು ಬರುವ ಎರಡು ಸ್ಥಳಗಳಲ್ಲಿ ಅವುಗಳನ್ನು ಲೋಪಿಸತಕ್ಕದ್ದು.

(ii) ವಿವರಣೆಯನ್ನು ಲೋಪಿಸತಕ್ಕದ್ದು.

೫. ೫೦ನೇ ಪ್ರಕರಣದ ಬದಲಾಗಿ ಹೊಸ ಪ್ರಕರಣವನ್ನು ಪ್ರತಿಸ್ಥಾಪಿಸುವುದು.—ಮೂಲ ಅಧಿನಿಯಮದ ೫೦ನೇ ಪ್ರಕರಣದ ಬದಲಾಗಿ, ಈ ಮುಂದಿನ ಪ್ರಕರಣವನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ,—

''೫೦. ಪರಿಷ್ಕರಣ.—(೧) ಉಚ್ಚ ನ್ಯಾಯಾಲಯವು, ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಿಂದ ತೀರ್ಣಗೊಳಿಸಲ್ಪಟ್ಟ ಯಾವುದೇ ಆದೇಶವನ್ನು ಅಥವಾ ಕೈಕೊಳ್ಳಲ್ಪಟ್ಟ ವ್ಯವಹರಣೆಯನ್ನು ಅಥವಾ ೧೪, ೧೫, ೧೬, ಅಥವಾ ೧೭ನೇ ಪ್ರಕರಣದ ಮೇರೆಗೆ ನಿಯಂತ್ರಕರಿಂದ ತೀರ್ಣಗೊಳಿಸಲ್ಪಟ್ಟ ಯಾವುದೇ ಆದೇಶವನ್ನು, ಅಂಥ ಆದೇಶದ ಅಥವಾ ವ್ಯವಹರಣೆಯ ವಿಧಿಸಮ್ಮತಿಯನ್ನು ಅಥವಾ ಕ್ರಮಬದ್ಧತೆಯನ್ನು, ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು, ಮತ್ತು ಅದರ ಸಂಬಂಧದಲ್ಲಿ ತಾನು ಸೂಕ್ತವೆಂದು ಆಲೋಚಿಸಿ ಸಂಬಂಧ ಆದೇಶವನ್ನು ಮಾಡಬಹುದು.

(೨) ಜಿಲ್ಲಾ ನ್ಯಾಯಾಧೀಶರು, ಯಾವುದೇ ಕಾಲದಲ್ಲಿ, ೫ನೇ ಪ್ರಕರಣದ (ಘ) ಖಂಡದ (iii)ನೇ ಒಳಖಂಡದಲ್ಲಿ ಉಲ್ಲೇಖಿತವಾದ ಮುನ್ಸೀಫರ ನ್ಯಾಯಾಲಯದಿಂದ ತೀರ್ಣಗೊಳಿಸಲ್ಪಟ್ಟ ಯಾವುದೇ ಆದೇಶವನ್ನು ಅಥವಾ ಕೈಕೊಳ್ಳಲ್ಪಟ್ಟ ವ್ಯವಹರಣೆಯನ್ನು ಅಂಥ ಆದೇಶದ ಅಥವಾ ವ್ಯವಹರಣೆಯ ವಿಧಿಸಮ್ಮತಿಯನ್ನು ಅಥವಾ ಕ್ರಮಬದ್ಧತೆಯನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು, ಮತ್ತು ಅದರ ಸಂಬಂಧದಲ್ಲಿ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಮಾಡಬಹುದು.

(೩) ಉಚ್ಚ ನ್ಯಾಯಾಲಯದ ಅಥವಾ ಜಿಲ್ಲಾ ನ್ಯಾಯಾಧೀಶರ ಮುಂದಿರುವ ಎಲ್ಲ ವ್ಯವಹರಣೆಗಳ ವೆಚ್ಚವು ಮತ್ತು ಪ್ರಾಸಂಗಿಕ ವೆಚ್ಚವು ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಅಥವಾ ಜಿಲ್ಲಾ ನ್ಯಾಯಾಧೀಶರ ವಿವೇಚನೆಗೊಳಪಟ್ಟಿರತಕ್ಕದ್ದು.

೬. ಇತ್ಯರ್ಥವಾಗಬೇಕಾದ ವ್ಯವಹರಣೆಗಳ ವಿಲೆ.—(೧) ಈ ಅಧ್ಯಾದೇಶವು ಜಾರಿಗೆ ಬಂದ ದಿನಾಂಕದಿಂದ ಅಥವಾ ಈ ಅಧ್ಯಾದೇಶದಿಂದ ತಿದ್ದುಪಡಿಯಾದ ಮೂಲ ಅಧಿನಿಯಮದ ೫ನೇ ಪ್ರಕರಣದ (ಘ) ಖಂಡದ (ii)ನೇ ಒಳಖಂಡದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಸದರಿ ೫ನೇ

ಪ್ರಕರಣದ (ಫ) ಖಂಡದ ಸಂದರ್ಭಾನುಸಾರವಾಗಿ (i)ನೇ ಒಳಖಂಡದಲ್ಲಿ ಅಥವಾ (ii)ನೇ ಒಳಖಂಡದಲ್ಲಿ ನಿರ್ದಿಷ್ಟಪಡಿಸಲಾದ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗಿನ ಮುನ್ಸೀಫ್ ನ್ಯಾಯಾಲಯವು ಮೂಲ ಅಧಿನಿಯಮದ ಮೇರೆಗೆ ಪ್ರಕರಣಗಳ ವಿಚಾರಣೆ ನಡೆಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತು ಹೋಗತಕ್ಕದ್ದು, ಮತ್ತು ಇಂಥ ಮುನ್ಸೀಫ್ ನ್ಯಾಯಾಲಯದಲ್ಲಿನ ಎಲ್ಲಾ ಆರ್ಜಿಗಳನ್ನು ಅಥವಾ ವ್ಯವಹರಣೆಗಳನ್ನು ಇಂಥ ಸದರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕೆ ವರ್ಗಾಯಿಸತಕ್ಕದ್ದು, ಮಂತ್ತು ಅವುಗಳು ಆದರೊಂದಿಗೆ ಹೂಡಲ್ಪಟ್ಟಿದ್ದರೆ ಅಥವಾ ಪ್ರಾರಂಭಿಸಲ್ಪಟ್ಟಿದ್ದರೆ ಹೇಗೋ ಹಾಗೆ ಸದರಿ ಸಿವಿಲ್ ನ್ಯಾಯಾಧಿಶರ ನ್ಯಾಯಾಲಯದಿಂದ ಇತ್ಯರ್ಥಗೊಳಿಸತಕ್ಕದ್ದು.

(೨) ಮೂಲ ಅಧಿನಿಯಮದ ೪೮ನೇ ಪ್ರಕರಣವು ಲೋಪಿಸಲ್ಪಟ್ಟರೂ, ಜಿಲ್ಲಾ ನ್ಯಾಯಾಧೀಶರ ಮಂದೆ ಈ ಅಧ್ಯಾದೇಶವು ಪ್ರಾರಂಭವಾದ ದಿನದಂದು ಇತ್ಯರ್ಥವಾಗಬೇಕಾದ ಅಪೀಲುಗಳನ್ನು, ಸದರಿ ಪ್ರಕರಣವು ಲೋಪಿಸಲ್ಪಟ್ಟಿರದಿದ್ದರೆ ಹೇಗೋ ಹಾಗೆ, ಜಿಲ್ಲಾ ನ್ಯಾಯಾಧೀಶರಿಂದ ಶ್ರುತಿಪಡಿಸಿಕೊಂಡು ನಿರ್ಣಯಿತಕ್ಕದ್ದು ಮತ್ತು ಈ ಅಧ್ಯಾದೇಶದ ಪ್ರಾರಂಭಕ್ಕೆ ಮುಂಚಿಯಿದ್ದ, ಮೂಲ ಅಧಿನಿಯಮದ ೪೯ನೇ ಪ್ರಕರಣದ ಉಪಬಂಧಗಳು ಇಂಥ ಅಪೀಲುಗಳಿಗೆ ಅನ್ವಯಿಸತಕ್ಕದ್ದು,

೭. ಕೆಲವು ಪ್ರಕರಣಗಳ ಸಂಬಂಧದಲ್ಲಿ ಉಪಬಂಧಗಳು.—ಈ ಅಧ್ಯಾದೇಶವು ಪ್ರಾರಂಭವಾದ ದಿನಾಂಕದಂದು,—

(i) ಮೂಲ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯಾಲಯದ ಅಥವಾ ನಿಯಂತ್ರಕರ ಯಾವುದೇ ಆದೇಶದ ಅಥವಾ ಡಿಕ್ರಿಯ ವಿರುದ್ಧ ಜಿಲ್ಲಾ ನ್ಯಾಯಾಧೀಶರಿಗೆ ಯಾವ ಅಪೀಲನ್ನು ಮಾಡ ತಕ್ಕದ್ದಿದ್ದವು, ಮತ್ತು,

(ii) ಮೂಲ ಅಧಿನಿಯಮದ ೪೮ನೇ ಪ್ರಕರಣವು ಲೋಪಿಸಲ್ಪಟ್ಟಿರದಿದ್ದರೆ ಯಾವ ವ್ಯಕ್ತಿಯು ಜಿಲ್ಲಾ ನ್ಯಾಯಾಧೀಶರಿಗೆ ಅಪೀಲನ್ನು ಮಾಡಬಹುದಾಗಿತ್ತೊ ಅಂಥ ಯಾವನೆ ವ್ಯಕ್ತಿಯು ಈ ಅಧ್ಯಾದೇಶದ ಪ್ರಾರಂಭ ದಿನದಿಂದ ಮೂವತ್ತು ದಿನಗಳೊಳಗೆ ಜಿಲ್ಲಾ ನ್ಯಾಯಾಧೀಶರಿಗೆ ಮನವಿಯನ್ನು ಸಲ್ಲಿಸಬಹುದು, ಮತ್ತು ಜಿಲ್ಲಾ ನ್ಯಾಯಾಧೀಶರು ಈ ಅಧ್ಯಾದೇಶದಿಂದ ತಿದ್ದುಪಡಿಯಾದ ಮೂಲ ಅಧಿನಿಯಮದ ೫೦ನೇ ಪ್ರಕರಣದ (೨)ನೇ ಒಳಪ್ರಕರಣ ಮೇರೆಗೆ, ಅಂಥ ಮನವಿಯು ಪರಿಷ್ಕರಣ ಮನವಿಯಾಗಿದ್ದರೆ ಹೇಗೋ ಹಾಗೆ ಅದನ್ನು ವಿಲೆ ಮಾಡತಕ್ಕದ್ದು.

ಮೋಹನಲಾಲ ಸುಖಾಡಿಯಾ,
ಕರ್ನಾಟಕ ರಾಜ್ಯಪಾಲರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಎಲ್. ರಾಮಸ್ವಾಮಿ,
ಸರ್ಕಾರದ ಪ್ರಾರೂಪಕಾರ ಮತ್ತು ಪದನಿಮಿತ್ತ ಸಹ ಕಾರ್ಯದರ್ಶಿ,
ವಿಧಿ ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

೧೭

ಕರ್ನಾಟಕ ಸರ್ಕಾರದ ಮುದ್ರಣಾಲಯದ ಡೈರೆಕ್ಟರ್‌ರವರಿಂದ ಮುದ್ರಿಸಲ್ಪಟ್ಟಿತು—ಬೆಂಗಳೂರು.